2. In article 334 of the Consitution, for the words, "fity years", the words "sixty years" shall be substituted. Amendment of article 334

STATEMENT OF OBJECTS AND REASONS

Article 334 of the Constitution lays down that the provisions of the Constitution relating to the reservation of seats for the Scheduled Castes and the Scheduled Tribes and the representation of the Anglo-Indian community by nomination in the Lok Sabha and in the Legislative Assemblies of the States shall cease to have effect on the expiration of a period of fifty years from the commencement of the Constitution. Although the Scheduled Castes and the Scheduled Tribes have made considerable progress in the last fifty years, the reasons which weighed with the Constituent Assembly in making provisions with regard to the aforesaid reservation of seats and nomination of members, have not ceased to exist. It is, therefore, proposed to continue the reservation for the Scheduled Castes and the Scheduled Tribes and the representation of the Anglo-Indians by nomination for a further period of ten years.

2. The Bill seeks to achieve the above object.

New Delhi; RAM JETHMALANI.

The 21st October, 1999.

ಅಧ್ಯಕ್ಷರು: ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಸಂವಿಧಾನ (ಎಂಬತ್ನಾಲ್ಕನೇ ತಿದ್ದುಪಡಿ) ವಿಧೇಯಕ 1999ರ ಇಂಗ್ಲೀಷ್ ಪತ್ರಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಲು ಒತ್ತಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಅಧ್ಯಕ್ಷರೆ, ನನ್ನದೊಂದು ಸಲಹೆ ಇದೆ, ಅದೇನೆಂದರೆ ಈ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಿಲ್ ಅನ್ನು ಗೌವರ್ನಮೆಂಟ್ ಆಫ್ ಇಂಡಿಯಾದವರು ರ್‍ಯಾಟಿಫಿಕೇಷನ್‌ಗೋಸ್ಕರ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿರುವಂಥಾದ್ದನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೆ ಅದನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ಕಳುಹಿಸದಿದ್ದರೆ ಹೇಗೆ? ಅದನ್ನು ನಮ್ಮಂಥವರು ತಿಳಿದುಕೊಳ್ಳಬಹುದು, ಆದರೆ ಇಂಗ್ಲೀಷ್ ಭಾಷೆ ಗೊತ್ತಿಲ್ಲದೇ ಇರುವವರಿಗೆ ಇದರ ಬಗ್ಗೆ ಗೊತ್ತಾಗಬೇಕಲ್ಲಾ? ಆದುದರಿಂದ ದಯಮಾಡಿ ಇನ್ನು ಮುಂದೆ ಕಾಗದಪತ್ರಗಳನ್ನು ಈ ಸಭೆಯ ಮುಂದಿಡುವಂತಹ ಸಂದರ್ಭದಲ್ಲಿ ಕನ್ನಡ ಭಾಷೆಯಲ್ಲಿ ಕೊಡುವಂತಹ ವ್ಯವಸ್ಥೆಯಾಗಬೇಕು. ಈಗ ಈ ವಿಚಾರ ಮಾನ್ಯ ಸಂಸದೀಯ ವ್ಯವಹಾರ ಸಚಿವರಿಗೆ ಸಂಬಂಧಿಸಿದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಮಗೆ ಕೇಂದ್ರ ಸರ್ಕಾರದವರು ಹೇಗೆ ಕಳುಹಿಸಿಕೊಡುತ್ತಾರೋ, ಅದನ್ನು ಹಾಗೆ ಯಥಾವತ್ತಾಗಿ ಈ ಸಭೆಯ ಮುಂದಿಡುವಂಥ ಪದ್ಧತಿ ಇದೆ. ಅದನ್ನು ನೀವು ಕನ್ನಡದಲ್ಲಿ ಭಾಷಾಂತರ ಮಾಡಿ ಸಭೆಯ ಮುಂದಿಡಬೇಕೆಂದರೆ ಕೊಡೋಣ.

ಅಧ್ಯಕ್ಷರು: ನಮಗೆ ಇದು ನಿನ್ನೆ ತಾನೆ ಮಾಹಿತಿ ಬಂದಿದೆ, ಅವಸರದಲ್ಲಿ ಈ ಸಭೆಯ ಮುಂದಿಟ್ಟಿದ್ದಾರೆ. ಇದನ್ನು ಯಾವಾಗ ಸಭೆಯಲ್ಲಿ ತೆಗೆದುಕೊಳ್ಳುತ್ತೇವೆಯೋ ಆಗ ಕನ್ನಡದಲ್ಲಿ ತರ್ಜುಮೆ ಮಾಡಿಸಿ ನಿಮಗೆ ಕೊಡಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಭಾಷಾಂತರ ಇಲಾಖೆ ಚೆನ್ನಾಗಿದೆ. ಇದೆಲ್ಲವನ್ನು ಅರ್ಧ ಗಂಟೆಯಲ್ಲಿ ಕನ್ನಡದಲ್ಲಿ ಭಾಷಾಂತರ ಮಾಡಿಸಿ ಕೊಡಬಹುದು. ನಾನು ತಮ್ಮ ಕಾರ್ಯಾಲಯದ ಬಗ್ಗೆ ಹೇಳುತ್ತಾ ಇಲ್ಲ. ನಾನು ಮಾನ್ಯ ಸಂಸದೀಯ ವ್ಯವಹಾರ ಸಚಿವರಿಗೆ ರೆಫರ್ ಮಾಡುತ್ತಿದ್ದೇನೆ. ಇದು ಬಹಳ ಮಹತ್ತರವಾದಂಥಾದ್ದು, ಇಲ್ಲಿ ಯಾವುದಾದರೂ ಅರ್ಜೆಂಟಾಗಿ ಫೈನಾನ್ಸ್ ಬಿಲ್, ಅಥವಾ ಇನ್ಯಾವುದಾದರೂ ಜರೂರು ಎಂದು ಆ ರೀತಿಯಲ್ಲಿ ತೆಗೆದುಕೊಂಡು ಬಂದರೆ ನಾವು ಅದನ್ನು ಒಪ್ಪಬಹುದು. ಆದರೆ ಇದು ದೇಶದ ಭವಿಷ್ಯ ನಿರ್ಧಾರ ಮಾಡುವಂಥಾದ್ದು, ಬಹಳ ಪ್ರಮುಖವಾದಂತಹ ವಿಚಾರವಾಗಿದೆ. ನಾವು ಇದರಲ್ಲಿ, ಭಾಷಾಂತರದಲ್ಲಿ ಟೆಕ್ನಿಕಲ್ ಫಾಲ್ಟ್ ಹುಡುಕಬೇಕೆಂಬ ದೃಷ್ಟಿಯಿಂದ ನಾನು ಹೇಳುತ್ತಾ ಇಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಸಭೆಯಲ್ಲಿರುವಂತಹ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ಓದಿ ತಿಳಿದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಕೊಟ್ಟಿದ್ದೇನೆ.

Sri D.B. Chandre Gowda: May I clarify the position. At the earliest opportunity the constitutional Amendment Bills should be placed before this House. ಈ ಅಮೆಂಡ್‌ಮೆಂಟ್ ಬಿಲ್ ಪಾರ್ಲಿಮೆಂಟ್‌ನಿಂದ ಇಲ್ಲಿಗೆ ಹೇಗೆ ಬಂದಿದೆಯೋ ಹಾಗೆ ನಾವು ಈ ಸದನದ ಮುಂದಿಟ್ಟಿದ್ದೇವೆ. ಇದನ್ನು ಭಾಷಾಂತರಿಸಬೇಕೆಂದರೆ ಈ ಸದನದಲ್ಲಿ ಭಾಷಾಂತರ ಮಾಡಬಹುದು, ಇಲ್ಲಿ ಪ್ರಾಜ್ಞರು,

ಭಾಷಾ ಪಂಡಿತರು ಇದ್ದಾರೆ. ಇದು ತಿಳಿಯದಿರುವಂಥಾದ್ದು ಏನೂ ಅಲ್ಲ, ಬಹಳ ಸೂಕ್ಷ್ಮವಾದ ವಿಚಾರವೂ ಅಲ್ಲ. ನಾನು ಏನು ಹೇಳಿದ್ದೇನೆಂದರೆ, constitution Amendment Bills, as amended which has been circulated to the States, it is obligatory on the part of the State Government or the Legislature to accept it at the earliest opportunity ಎಂದು ಹೇಳಿದ್ದಾರೆ. ಆದುದರಿಂದ ಇದನ್ನು ನಾವು ಭಾಷಾಂತರ ಮಾಡಿ ಸರ್ಕ್ಯೂಲೇಷನ್ ಮಾಡಿ, ಏತಕ್ಕೆ ತಡವಾಯಿತೆನ್ನುವ ನಾಳೆ ಪ್ರಶ್ನೆ ಬರಬಾರದೆಂದು ಯಥಾವತ್ತಾಗಿ ಈ ಸದನದಲ್ಲಿ ಮಂಡಿಸಿದ್ದೇವೆ. ಇದನ್ನು ತರ್ಜುಮೆ ಮಾಡಬೇಕೆಂದು ನಮ್ಮ ಹಿರಿಯ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಹಾಗೆ ಮಾಡಿಕೊಡೋಣ.

ಅಧ್ಯಕ್ಷರು: ನಮ್ಮ ಕಛೇರಿಯಿಂದ ಮಧ್ಯಾಹ್ನ ಒಂದು ಗಂಟೆಯೊಳಗೆ ಇದನ್ನು ನಿಮಗೆ ಕನ್ನಡಕ್ಕೆ ತರ್ಜುಮೆ ಮಾಡಿ ಪ್ರತಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ. Before me '0' clock it will reach all the members.

ಶ್ರೀ ಎಸ್.ಎಸ್. ಪಾಟೀಲ್: ಕನ್ನಡಕ್ಕೆ ಅಪಮಾನವಾಗುವ ಹಾಗೆ ಮಾತನಾಡಬಾರದು, ಇದು ಕರ್ನಾಟಕ ವಿಧಾನಸಭೆ, ಅಲ್ಲಿಂದ ಬಂದದ್ದನ್ನು ಇಲ್ಲಿ ಇಡುತ್ತೇವೆ, ಕನ್ನಡದ ಅವಶ್ಯಕತೆಯಿಲ್ಲವೆಂದರೇನು? ದಯವಿಟ್ಟು ತಾವೇ ಹೇಳಿ ಸರ್.

ಶ್ರೀ ಡಿ.ಬಿ. ಚಂದ್ರೇಗೌಡ: ಇದರಲ್ಲಿ ಅವಮಾನ ಯಾವುದು?

ಶ್ರೀ ಎಸ್.ಎಸ್. ಪಾಟೀಲ್: ಹೌದು, ಈ ವಿಧಾನಸಭೆಯಲ್ಲಿ ಎಲ್ಲವೂ ಕನ್ನಡದಲ್ಲಿರಬೇಕು.....

ಶ್ರೀ ಡಿ.ಬಿ. ಚಂದ್ರೇಗೌಡ: ಭಾಷೆಯ ಬಗ್ಗೆ ಮಾತನಾಡುವಾಗ, ನೀವು ಕನ್ನಡದಲ್ಲಿ ಇಡಿ ಎಂದು ಹೇಳಿ, ಎನ್ನುವ ಪದಗಳನ್ನು ದಯವಿಟ್ಟು ಇಲ್ಲಿ ಬಳಸಬೇಡಿ. ಕನ್ನಡದ ಬಗ್ಗೆ ಅಭಿಮಾನವನ್ನು ನಾನು ಬೇರೆ ಮಾನ್ಯ ಸದಸ್ಯರಿಂದ ಕಲಿಯಬೇಕಾಗಿಲ್ಲ. ಆದುದರಿಂದ ಶಾಸನ ಸಭೆಯಲ್ಲಿ ಭಾಷೆ ಬಳಸುವಾಗ ಯಾರೋ ಮಾಡಿದರು ಎಂದು ಹೇಳುವುದನ್ನು ಸರಿಯಲ್ಲ ನಿಜವಾಗಿಯೂ ಸರ್ಕಾರದ ಉದ್ದೇಶ ಅದಲ್ಲ, ನಿಮಗಿಂತ ಹೆಚ್ಚು ಅಭಿಮಾನ ನನಗೂ ಇದೆ.

ಅಧ್ಯಕ್ಷರು: ಮುಗಿದಿರುವ ವಿಷಯವನ್ನು ತೆಗೆದುಕೊಂಡು ನೀವು ಏತಕ್ಕೆ ಮಾತನಾಡುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಮಾಡುತ್ತೀರೆನ್ನುವ ಶಬ್ದವನ್ನು ಕಡತದಿಂದ ತೆಗೆದು ಹಾಕಬೇಕು, ಈ ರೀತಿ ಹೇಗೆ ಬೇಕಾದರೂ ಈ ಸದನವನ್ನು ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಆ ಶಬ್ದವನ್ನು ಕಡತದಿಂದ ತೆಗಸೋಣ ಬಿಡಿ It won't be in the proceedings ಮಧ್ಯಾಹ್ನ ಒಂದು ಗಂಟೆಯೊಳಗೆ ತರ್ಜುಮೆಯಾದ ಪ್ರತಿಗಳನ್ನು ನಿಮಗೆ ತಲುಪಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಈಗ ಎರಡು ನಿಲುವಳಿ ಸೂಚನೆಗಳು ಬಂದಿವೆ. ಈ ಎರಡೂ ಸಹ ತುರ್ತು ವಿಷಯವೆನ್ನುವುದು ನಿಮಗೆ ಗೊತ್ತಿದೆ, ಇವತ್ತು ಮಧ್ಯಾಹ್ನ ಮೂರು ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಕೂಡ ಇಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆ, ನಾವು ಇದನ್ನು ರ್ಯಾಟಿಫೈ ಮಾಡಬೇಕಾಗುತ್ತದೆ, ಇದರ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಸ್ವಾಗತ ಮಾಡಬೇಕಾಗಿರುವ ದೃಷ್ಟಿಯಿಂದಾಗಿ ನಾವು ಮಾತನಾಡಬೇಕಾಗುತ್ತದೆ. ಎರಡನೆಯದಾಗಿ, ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಮಹತ್ವದ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ, ಈರುಳ್ಳಿ ಬೆಲೆ ಕುಸಿತದ ಬಗ್ಗೆ ನಾವೊಂದು ನಿಲುವಳಿ ಸೂಚನೆಯನ್ನು ತಂದಿದ್ದೇವೆ, ಆ ಬಗ್ಗೆ ಚರ್ಚೆಯಾಗಬೇಕಾಗಿದೆ, ಹೊಸದಾಗಿ ಬಂದಿರುವ ಸುಮಾರು 26 ಜನ ಮಾನ್ಯ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಆದುದರಿಂದ ದಯಮಾಡಿ ತಾವು ಬಿಎಸಿ ಸಭೆಯನ್ನು ಮಧ್ಯಾಹ್ನ ಕರೆಯಿರಿ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆಯೇ ಮೊದಲ ಗಂಟೆಯಲ್ಲಿ ಉತ್ತರವನ್ನು ಕೊಡಲಿ, ಆ ಸ್ಪಷ್ಟನೆಯನ್ನು ಕೇಳಿ ನಾಳೆ ಮಧ್ಯಾಹ್ನ ಬೇಕಾದರೆ ಈ ಸದನವನ್ನು ಮುಕ್ತಾಯ ಮಾಡೋಣ.